2007–08ನೇ ಸಾಲಿಗೆ ಇಲ್ಲಿಯವರೆಗೂ ಸರಬರಾಜು ಮಾಡಿರುವ ಸಮವಸ್ತ್ರ ಬಟ್ಟೆಗಳ ಮೊತ್ತ ರೂ 2617 44 ಲಕ್ಷಗಳಲ್ಲಿ ರೂ 2331 76 ಲಕ್ಷ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯು ಇನ್ನೂ ಪಾವತಿಸಬೇಕಾಗಿದೆ

ಈ) 2006–07 ಮತ್ತು 2007–08ನೇ ಸಾಲಿನ ವಿದ್ಯಾ ವಿಕಾಸ ಯೋಜನೆಗೆ ಸಂಬಂಧಿಸಿದ್ದು, ಈ ಹಣವನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ

ಉ) 2007–08ನೇ ಸಾಲಿನಲ್ಲಿ ಬಾಕಿ ಹಣವನ್ನು ಪಡೆಯಲಾಗುವುದು

ಊ) ಹೌದು, ತೊಂದರೆಯಾಗುತ್ತದೆ

ಋ) ಈಗಾಗಲೇ 2007–08ನೇ ಸಾಲಿಗೆ ಗುಲ್ಬರ್ಗ ಮತ್ತು ಮೈಸೂರು ಕಂದಾಯ ವಿಭಾಗಗಳ ಸರ್ಕಾರಿ ಶಾಲೆಗಳಿಗೆ ಸಮವಸ್ತ್ರ ಸರಬರಾಜು ಕಾರ್ಯವನ್ನು ನಿಗಮವು ಪೂರ್ಣಗೊಳಿಸಿದ್ದು ಉಳಿದ ಬೆಂಗಳೂರು ಮತ್ತು ಬೆಳಗಾಂ ವಿಭಾಗಗಳಿಗೆ ನಿಗದಿತ ದಿನಾಂಕದೊಳಗೆ ಸಮವಸ್ತ್ರಗಳನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ

ಎ) ನೇಕಾರರ ಕಲ್ಯಾಣ ಯೋಜನೆಯಡಿ ನಿಗಮದಡಿ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ನೇಕಾರರಿಗೆ ವಿಮಾ ಯೋಜನೆಯನ್ನು ಅಳವಡಿಸಲಾಗಿದೆ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲು 2007–08ನೇ ಸಾಲಿನಲ್ಲಿ ಅನುದಾನವಿದ್ದು, ಮನ್ನಾ ಮಾಡಲು ಕ್ರಮ ವಹಿಸಲಾಗುವುದು

1410 (2049) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶ ವಿಸ್ತೀರ್ಣವೆಷ್ಟು,

ಆ) ಇದರಲ್ಲಿ ಅತಿದಟ್ಟ ಅಡವಿ, ಸಾದಾರಣ ದಟ್ಟ ಅಡವಿ ಹಾಗೂ ಬಯಲು ಅಡವಿಗಳು ಯಾವುವು (ಜಿಲ್ಲಾವಾರು ಪೂರ್ಣವಾದ ಮಾಹಿತಿ ನೀಡುವುದು),

ಇ) ಈ ವಿಧದ ಅರಣ್ಯ ವಿಂಗಡಣೆಯನ್ನು ಯಾವ ಮಾನದಂಡದಲ್ಲಿ ಮಾಡಲಾಗುತ್ತದೆ,

ಈ) ಹಾಲಿ ಇರುವ ಅರಣ್ಯ ಪ್ರದೇಶದ ವ್ಯಾಪ್ತಿಯ ವಿಸ್ತೀರ್ಣವೆಷ್ಟು,

ಉ) ಇದು ಕಳೆದ 5 ವರ್ಷಗಳಿಗೆ ಹೋಲಿಸಿದ್ದಲ್ಲಿ ಕಡಿಮೆಯಾಗಿ ಅರಣ್ಯ ನಾಶವಾಗಿ ಅರಣ್ಯ ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಊ) ಎಲ್ಲೆಲ್ಲಿ ಅರಣ್ಯ ನಾಶವಾಗಿದೆ ಹಾಗೂ ಅರಣ್ಯ ನಾಶಕ್ಕೆ ಕಾರಣಗಳೇನು?

ಋ) ಎಷ್ಟು ಪ್ರಮಾಣದ ಅರಣ್ಯ ನಾಶವಾಗಿದೆ,

ಋೂ) ಈ ಪೈಕಿ ದಟ್ಟ ಅರಣ್ಯ ಪ್ರದೇಶ ನಷ್ಟವಾಗುತ್ತಿರುವುದನ್ನು, ಅರಣ್ಯ ಪ್ರದೇಶಗಳ್ಯಾವುವು ಎಂಬುದನ್ನು ಸರ್ಕಾರ ಸಮೀಕ್ಷೆ ಮಾಡಿ ಪತ್ತೆ ಹಚ್ಚಿದೆಯೇ,

ಎ) ಇಲ್ಲದಿದ್ದಲ್ಲಿ ಕಾರಣಗಳೇನು,

ಏ) ಯಾವಾಗ ಈ ಕಾರ್ಯ ಮಾಡಲಾಗುವುದು?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಫಾರೆಸ್ಟ್ ಸರ್ವೆ ಆಫ್ ಇಂಡಿಯಾ ರವರು ಪ್ರಕಟಿಸಿರುವ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ 2003ರ ಪ್ರಕಾರ, ರಾಜ್ಯದಲ್ಲಿ ಒಟ್ಟು ಅರಣ್ಯ ಹೊದಿಕೆ 36449 ಚದರ ಕಿಲೋ ಮೀಟರ್‌ಗಳಾಗಿರುತ್ತದೆ

ಆ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಇ) ಅರಣ್ಯವನ್ನು ಹೊದಿಕೆಯ ಆಧಾರದ ಮೇಲೆ ವಿಂಗಡಿಸಲಾಗಿದೆ

ಈ) 36,449 ಚ ಕಿ ಮೀ

ಉ) ಹೌದು

ಊ) ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ

ಅರಣ್ಯ ಪ್ರದೇಶವು ಕಡಿಮೆಯಾಗಿರುವುದಕ್ಕೆ ಮುಖ್ಯ ಕಾರಣ ಅರ್ಧ ವಿವರಣೆಯಲ್ಲಿ ಆಗಿರುವ ಬದಲಾವಣೆ (International changes) ಹಾಗೂ

ಅಂಶಿಕವಾಗಿ ಅರಣ್ಯ ಪ್ರದೇಶಗಳ ನಿಜವಾದ ನಾಶದಿಂದ ಆಗಿರುತ್ತದೆ, ನಿಜವಾದ ಅರಣ್ಯ ನಾಶಕ್ಕೆ ಅರಣ್ಯ ಅತಿಕ್ರಮಣ, ಸ್ಥಳದಿಂದ ಸ್ಥಳಕ್ಕೆ ಬದಲಾಯಿಸಲಾಗುವ ಕೃಷಿ ಪದ್ಧತಿ, ಮರಗಳನ್ನು ಕಡಿಯುವಿಕೆ ಇತ್ಯಾದಿಗಳೇ ಕಾರಣ

ಋ) ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ

ಋೂ) ಹೌದು

ಎ) ಉದ್ಭವಿಸುವುದಿಲ್ಲ

ಏ) ಉದ್ಭವಿಸುವುದಿಲ್ಲ

ಅನುಬಂಧ –1

(ಮೂಲ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್ –2003)

ಜಿಲ್ಲೆ	ಅರಣ್ಯ ಹೊದಿಕೆ			ಒಟ್ಟು	ವ್ಯತ್ಯಾಸ
	ಹೆಚ್ಚ ದಟ್ಟ	ಮಧ್ಯಮ ದಟ್ಟ	ತೆರೆದ ಅರಣ್ಯ	ಅರಣ್ಯ	
ಬಾಗಲಕೋಟೆ	0	32	182	214	–170
ಬೆಂಗಳೂರು (ಗ್ರಾ)	0	166	692	856	22
ಬೆಂಗಳೂರು (ನಗರ)	0	45	123	168	6
ಬೆಳಗಾಂ	19	703	390	1112	–52
ಬಳ್ಳಾರಿ	0	138	757	895	34
ಬೀದರ್	0	20	42	62	–94
ಬಿಜಾಪುರ	0	1	37	38	–140
ಚಾಮರಾಜನಗರ	12	1085	1523	2620	52
ಚಿಕ್ಕಮಗಳೂರು	4	2853	640	3497	–57

ಚಿತ್ರದುರ್ಗ	0	49	396	445	11
ದಕ್ಷಿಣ ಕನ್ನಡ	71	1024	1302	2397	–48
ದಾವಣಗೆರೆ	0	342	417	759	–13
ಧಾರವಾಡ	0	235	182	417	13
ಗದಗ್	0	23	150	173	3
ಗುಲ್ಬರ್ಗಾ	0	91	239	330	–143
ಹಾಸನ	29	826	447	1302	–23
ಹಾವೇರಿ	0	182	282	464	14
ಕೊಡಗು	158	2464	425	3047	39
ಕೋಲಾರ	0	82	500	582	7
ಕೊಪ್ಪಳ	0	11	35	46	1
ಮಂಡ್ಯ	0	146	375	521	5
ಮೈಸೂರು	0	642	503	1145	–4
ರಾಯಚೂರು	0	20	87	107	–5
ಶಿವಮೊಗ್ಗ	23	3052	1401	4476	3
ತುಮಕೂರು	0	111	595	706	8
ಉಡುಪಿ	11	1432	783	2226	–46
ಉತ್ತರ ಕನ್ನಡ	104	6255	1483	7842	35

1411 (1434) ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ) – ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?